## ಮೋಹಕ ಮೈಮಾಟ

ಫಿಟ್‌ನೆಸ್ ವಿಷಯ ಬಂದಾಗ ಹೇಮಮಾಲಿನಿ ಸರಿಗಟ್ಟುವವರೇ ಇಲ್ಲ ಎನ್ನಬಹುದು. ಭರತನಾಟ್ಯ, ಮೋಹಿನಿಯಾಟ್ಟಂ ನೃತ್ಯ ಕಲಾವಿದೆಯೂ ಆಗಿರುವ ಈ 'ಎವರ್‌ಗ್ರೀನ್ ಸುಂದರಿ' ದೇಹದ ತೂಕವನ್ನು ಯಾವತ್ತೂ ಹೆಚ್ಚಿಸಿಕೊಳ್ಳುವುದಿಲ್ಲವಂತೆ.

'ಆರೋಗ್ಯ, ಸೌಂದರ್ಯ, ಫಿಟ್‌ನೆಸ್ ಮೂರನ್ನೂ ಗಮನದಲ್ಲಿಟ್ಟುಕೊಂಡು ದಿನಾ ಬೆಳಿಗ್ಗೆ ಯೋಗ, ವ್ಯಾಯಾಮ, ಧ್ಯಾನ ಮಾಡುತ್ತೇನೆ. ಆಹಾರದ ಮೇಲೂ ಸದಾ ನಿಗಾ ಇಡುತ್ತೇನೆ. ಒಣಹಣ್ಣು, ಹಣ್ಣುಗಳು, ತರಕಾರಿ, ಮೊಳಕೆಕಾಳುಗಳನ್ನು ಧಾರಾಳವಾಗಿ ತಿನ್ನುತ್ತೇನೆ' ಎನ್ನುತ್ತಾರೆ 68ರ ಹರೆಯದ ಈ ಚೆಂದುಳ್ಳಿ ಚೆಲುವೆ.



ಆಭರಣಗಳ ಬಗ್ಗೆ ತಮ್ಮ ಪ್ರೀತಿಯನ್ನು ಹೊಳೆವ ಕಂಗಳ ಜತೆಗೆ ಆತ್ಮೀಯ ಮಾತಿನ ಮೂಲಕ ಹೊರಗೆಡವಿದರು.

ಬೆಂಗಳೂರಿನ ಎವಿಆರ್ ಸ್ವರ್ಣಮಹಲ್ ಫಾರ್‌ಎವರ್‌ಮಾರ್ಕ್ ಜ್ಯುವೆಲ್ಲರಿ ಜತೆ ಮಾರುಕಟ್ಟೆಯ ಪಾಲುದಾರಿಕೆ ಮಾಡಿಕೊಂಡಿದ್ದು, ವಜ್ರಾಭರಣಗಳ ಅನಾವರಣಕ್ಕಾಗಿ ಬಂದಿದ್ದ ಹೇಮಮಾಲಿನಿ, ವಜ್ರದ ಒಡವೆಗಳ ಜತೆಗೆ ತಮ್ಮ ಅವಿನಾಭಾವ ಸಂಬಂಧದ ಬಗ್ಗೆ ಮಾತನಾಡಿದರು.

'ವಜ್ರದ ಒಡವೆ ನನಗೆ ಬಹಳ ಇಷ್ಟ. ವಜ್ರದ ಉಂಗುರ, ನೆಕ್ಲೆಸ್‌ಗಳನ್ನು ಪ್ರತಿ ಕಾರ್ಯಕ್ರಮಗಳಿಗೂ ಧರಿಸುತ್ತೇನೆ. ಅದರಲ್ಲೂ ಓಲೆ ಮತ್ತು ನೆಕ್ಲೆಸ್ ಬಹಳ ಇಷ್ಟಪಡುತ್ತೇನೆ' ಎನ್ನುವ ಹೇಮಮಾಲಿನಿ, 'ವಜ್ರದ ಆಭರಣ ಒಂದು ರೀತಿಯ 'ಯುನಿಕ್ ಐಡೆಂಟಿಟಿ' ಕೊಡುತ್ತದೆ. ನನಗೆ ಮೊದಲ ವಜ್ರದ ಉಂಗುರವನ್ನು ತಂದೆ ಉಡುಗೊರೆಯಾಗಿ ನೀಡಿದ್ದರು. ನಾನು ಕೂಡ ವಜ್ರದ ಒಡವೆಗಳ ಸಂಗ್ರಹವನ್ನು ಇಟ್ಟುಕೊಂಡಿದ್ದೇನೆ. ಫಾರೆವರ್‌ಮಾರ್ಕ್ ವಜ್ರದಾಭರಣಗಳೂ ವಿಶೇಷವಾಗಿ ಅಪರೂಪದ ವಿನ್ಯಾಸಗಳ ಸಂಗ್ರಹವನ್ನು ಹೊಂದಿದೆ ಎನ್ನುತ್ತಾರೆ.

### ಮಾಸದ ಹೊಳಪು

ವಜ್ರಾಭರಣದ ಮೇಲೆ ಮಹಿಳೆಯರ ಆಸಕ್ತಿ ಎಂದಿಗೂ ಕಡಿಮೆಯಾಗಲ್ಲ. ಏಕೆಂದರೆ ವಜ್ರದ ಆಭರಣಗಳ ಬಣ್ಣ ಮಾಸುವುದಿಲ್ಲ, ಒಳ್ಳೆಯ ಹೊಳಪು ಇರುತ್ತದೆ, ಮದುವೆ, ಪಾರ್ಟಿ.. ಹೀಗೆ ಯಾವುದೇ ಸಮಾರಂಭಗಳಿಗೆ ಹೋಗುವಾಗಲೂ ಗ್ರ್ಯಾಂಡ್ ಲುಕ್ ಅನ್ನೇ ಕೊಡುತ್ತದೆ. ಹೀಗಾಗಿ ಆಧುನಿಕ ಮನೋಭಾವದ ಮಹಿಳೆಯರು ಚಿನ್ನದ ಆಭರಣಕ್ಕಿಂತಲೂ ವಜ್ರದ ಒಡವೆಗಳ ಮೇಲೇ ಹೆಚ್ಚಿನ ಒಲವು ತೋರುತ್ತಿದ್ದಾರೆ. ವಜ್ರದ ಆಭರಣ ಸಾಂಪ್ರದಾಯಿಕ ಮತ್ತು ಆಧುನಿಕ ಎರಡೂ ಮನೋಭಾವಕ್ಕೆ ಸರಿಯಾಗಿ ಹೊಂದುತ್ತದೆ. ವಜ್ರಾಭರಣದಲ್ಲಿ 'ಸಿಗ್ನೇಚರ್ ಪೀಸ್' ಎಲ್ಲ ಉಡುಪಿಗೂ ಸರಿಹೊಂದುತ್ತದೆ. ಇದನ್ನು ಧರಿಸಿದರೆ ಬೇರೆ ಯಾವುದೇ ಒಡವೆ ಹಾಕಿಕೊಳ್ಳುವ ಅಗತ್ಯವೂ ಇರುವುದಿಲ್ಲ.

### ಹತ್ತು ಹಲವು ವಿನ್ಯಾಸ

'ವಜ್ರದ ಆಭರಣವನ್ನು ವಿಶ್ವದಾದ್ಯಂತ ಮಹಿಳೆಯರು ಮೆಚ್ಚುಗೆಯಿಂದ ಧರಿಸುತ್ತಿದ್ದು, ಇದಕ್ಕಾಗಿ ಫಾರೆವರ್ ಮಾರ್ಕ್ 'ಗ್ಲೋಬಲ್ ಡಿಸೈನ್' ಅನ್ನು ರೂಪಿಸಿಕೊಂಡಿದೆ. ಇದರಂತೆ ವಜ್ರದಲ್ಲಿ 'ಮೆಲಿಮೊವ' ಎಂಬ ಡಿಸೈನ್ ತಯಾರು ಮಾಡಿ ಇದರಲ್ಲಿ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವದ ಪ್ರತಿಬಿಂಬ ಎಂಬಂತೆ ಆಭರಣ ತಯಾರಿಸಲಾಗಿದೆ.

ವಜ್ರದ ಆಭರಣಗಳಲ್ಲಿ ಆದಷ್ಟು ಸಿಂಪಲ್ ಆಗಿರುವುದೇ ಮಹಿಳೆಯರು ಬಯಸುತ್ತಾರೆ. ಸಿಂಪಲ್ ಆಗಿರುವ ರಿಂಗ್, ನೆಕ್ಲೆಸ್ ಆಕರ್ಷಕ ಲುಕ್ ಕೊಡುತ್ತದೆ. ನೂರಾರು ವರ್ಷ ಇತಿಹಾಸವಿರುವ ವಜ್ರಾಭರಣಗಳು ಇಂದಿಗೂ ಜನಪ್ರಿಯತೆ ಕಳೆದುಕೊಂಡಿಲ್ಲ. ಹೀಗಾಗಿ ಸಾಂಪ್ರದಾಯಿಕ ಒಡವೆಗಳಿಗೆ ಆಧುನಿಕ ಟಚ್ ಕೊಡುವ ಪ್ರಯತ್ನವನ್ನೂ ಆಭರಣ ಮಳಿಗೆಗಳು ಮಾಡುತ್ತಿವೆ.

'ಒಡವೆಗಳು ಚಿನ್ನದ್ದೇ ಆಗಿರಲಿ, ವಜ್ರದ್ದೇ ಆಗಿರಲಿ. 'ಗುಣಮಟ್ಟ'ವೇ ನಮ್ಮ ಮಂತ್ರ. ಗುಣಮಟ್ಟದೊಂದಿಗೆ ಯಾವತ್ತೂ ರಾಜಿ ಮಾಡಿಕೊಳ್ಳುವುದಿಲ್ಲ' ಎನ್ನುತ್ತಾರೆ ಎವಿಆರ್ ಸ್ವರ್ಣಮಹಲ್‌ನ ವ್ಯವಸ್ಥಾಪಕ ನಿರ್ದೇಶಕ ಸಂಜಯ್. ಇದರೊಂದಿಗೆ 'ವೈವಿಧ್ಯತೆ'ಯೂ ನಮ್ಮ ವೈಶಿಷ್ಟ್ಯ. ಆಭರಣಗಳಲ್ಲಿ ಹಲವು ವೈವಿಧ್ಯಗಳನ್ನು ನೀಡಲು ನಾವು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇವೆ' ಎಂದೂ ಹೇಳುತ್ತಾರೆ ಸಂಜಯ್.

ಮಹಿಳೆಯರ ಭಾವನೆ, ಹಣ ಹೂಡಿಕೆ, ಆಭರಣಗಳನ್ನು ಕೊಂಡು ತಮ್ಮದಾಗಿಸುವ ತವಕ, ಇವೆಲ್ಲದರ ಜತೆಗೆ ಫ್ಯಾಷನೆಬಲ್ ಆಗಿ ಕಾಣಬೇಕೆಂಬ ತುಡಿತ.. ಈ ಎಲ್ಲ ಇಂಗಿತವನ್ನು ಮಡಿಲಲ್ಲಿಟ್ಟುಕೊಂಡು ವಜ್ರದಲ್ಲಿ ವೈವಿಧ್ಯಮಯ ಮತ್ತು ವಿಭಿನ್ನ ವಿನ್ಯಾಸಗಳನ್ನು ನೀಡಲು ವಜ್ರಾಭರಣ ಮಳಿಗೆಗಳು ಪ್ರಯತ್ನಿಸುತ್ತಿವೆ. ವಜ್ರಾಭರಣದಲ್ಲಿ ನವಿಲಿನ ವಿನ್ಯಾಸ, ಸೆವೆನ್ ಸ್ಟೋನ್ ಡಿಸೈನ್ ಮುಂತಾದವನ್ನು ಹೊಸ ಟ್ರೆಂಡ್. ಮದುವೆ ಸಂದರ್ಭಕ್ಕಾಗಿ ಮಲ್ಟಿಪರ್ಪಸ್ ಜ್ಯುವೆಲ್ಲರಿಗಳೂ ಈಗ ಲಭ್ಯ. ■